ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ಆ.ಅಂ.ಅಪ್/02/2018-19 ದಿನಾಂಕ: 28/03/2019

– ಸುತ್ತೋಲೆ –

ವಿಷಯ : ಏಪ್ರಿಲ್-2019 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್ ನಲ್ಲಿ ಅಪ್‌ಡೇಟ್ ಮಾಡುವ ಬಗ್ಗೆ.

ಉಲ್ಲೇಖ : 1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:20.08.2018ರ ನಡೆದ ಸಭಾ ನಡಾವಳಿಗಳು.

2. ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿ:15.02.2019

*****

ರಾಜ್ಯದ ಎಲ್ಲಾ ಎನ್.ಎಸ್.ಕ್ಯೂ.ಎಫ್ ಮತ್ತು ಜೆ.ಟಿ.ಎಸ್ ಶಾಲೆಗಳ, ಆಯಾ ಶಾಲೆಯ ಮುಖ್ಯಸ್ಥರು ಏಪ್ರಿಲ್-2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಶಾಲಾ ಅಭ್ಯರ್ಥಿಗಳ (CCERF), ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಂಡಳಿಯ ಜಾಲತಾಣದಲ್ಲಿ ಲಭ್ಯವಿರುವ ತಂತ್ರಾಂಶವನ್ನು ಬಳಸಿ ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳ ಮುಖ್ಯಸ್ಥರು ಆಯಾ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ದಿನಾಂಕ:01.04.2019 ರಿಂದ ಅಪ್‌ಡೇಟ್ ಮಾಡಲು ಸೂಚಿಸಿದೆ.

1. ಮಂಡಳಿಯ ಜಾಲತಾಣ http://www.kseeb.kar.nic.in ನಲ್ಲಿ ತಂತ್ರಾಂಶ ಲಭ್ಯವಿದೆ.
2. ಈಗಾಗಲೇ ಶಾಲಾ ಲಾಗಿನ್‌ನಲ್ಲಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿರುವ ತಂತ್ರಾಂಶದ ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್‌ನ್ನು ಬಳಸಿ ಆಂತರಿಕ ಅಂಕಗಳನ್ನು ಅಪ್‌ಡೇಟ್ ಮಾಡಲು ಬಳಸುವುದು.
3. ಲಾಗ್‌ಇನ್ ಆದ ನಂತರ ಮೊದಲು Internal Marks Entry ಮೇಲೆ ಕ್ಲಿಕ್ ಮಾಡಿದಾಗ ಡ್ರಾಪ್ ಡೌನ್ ಮೆನುವಿನಲ್ಲಿ 9th Standard and 10th standard ಎಂದು ಎರಡು ಆಯ್ಕೆಗಳು ದೊರೆಯುತ್ತದೆ.
4. 9th Standard (Only for NSQF) ಮೇಲೆ ಕ್ಲಿಕ್ ಮಾಡಿದಾಗ ವೆಬ್ ಪೇಜ್‌ನಲ್ಲಿ ತೆರೆಯಲಾಗುವ ನಿಗಧಿತ ನಮೂನೆಯಲ್ಲಿ ವಿದ್ಯಾರ್ಥಿಗಳ ಪೂರ್ಣ ಮಾಹಿತಿ ಮತ್ತು ಬಾಹ್ಯ ಪರೀಕ್ಷೆ, ಆಂತರಿಕ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ನಮೂದಿಸಿ Save ಮಾಡಬೇಕು.
5. 10th standard (NSQF and JTS) ಮೇಲೆ ಕ್ಲಿಕ್ ಮಾಡಿದಾಗ ತೆರೆಯಲಾಗುವ ವೆಬ್‌ಪೇಜ್‌ನಲ್ಲಿ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ವಿದ್ಯಾರ್ಥಿಯ ಎಲ್ಲಾ ಮಾಹಿತಿಗಳು Display ಆಗುತ್ತದೆ. ವಿದ್ಯಾರ್ಥಿ ಭಾವಚಿತ್ರ, ಸಹಿ ಸಹಿತ ವಿವರಗಳು Display ಆಗುವುದರಿಂದ ಶಿಕ್ಷಕರು ಮತ್ತೊಮ್ಮೆ ತಾವು enter ಮಾಡುತ್ತಿರುವ ಅಂಕಗಳು ನಿರ್ದಿಷ್ಟ ವಿದ್ಯಾರ್ಥಿಯದೇ ಎಂದು ಖಚಿತಪಡಿಸಿಕೊಳ್ಳಲು ಸಾಧ್ಯವಿದೆ. ಇದರಿಂದಾಗಿ ಯಾವುದೇ ಕಾರಣಕ್ಕೂ ಒಬ್ಬ ವಿದ್ಯಾರ್ಥಿಯ ಅಂಕಗಳು ಮತ್ತೊಬ್ಬ ವಿದ್ಯಾರ್ಥಿಗೆ enter ಮಾಡುವ ತಪ್ಪು ಅವಕಾಶವಿರುವುದಿಲ್ಲ. ನಂತರ Hide Candidate Details Button ನ್ನು ಸಹ ಬಳಸಬಹುದಾಗಿದೆ.
6. ವಿದ್ಯಾರ್ಥಿಯು ತೆಗೆದುಕೊಂಡಿರುವ ಭಾಷೆ ಮತ್ತು ವಿಷಯಗಳು ಹಾಗೂ ತಂತ್ರಾಂಶದಲ್ಲಿ Display ಆಗಿರುವ ಭಾಷೆ ಮತ್ತು ವಿಷಯಗಳು ಸರಿಯಾಗಿರುತ್ತದೆ ಎಂದು ಖಚಿತಪಡಿಸಿಕೊಂಡು, ಆಯಾ ಭಾಷೆ ಮತ್ತು ವಿಷಯಗಳಿಗೆ ಅನುಸಾರವಾಗಿ ಆಂತರಿಕ ಅಂಕಗಳನ್ನು ಹಾಗೂ ಜೆ.ಟಿ.ಎಸ್ ವಿಷಯದ ಪ್ರಾಯೋಗಿಕ ಪರೀಕ್ಷೆಯ (Only for JTS schools) ಅಂಕಗಳನ್ನು ಸಹ ನಮೂದಿಸಿ Save ಮಾಡಬೇಕು.

7. ಪ್ರತಿ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ನಮೂದಿಸಿ Save ಮಾಡಿದ ನಂತರ ವಿದ್ಯಾರ್ಥಿವಾರು ವರದಿಯ Print ಸೌಲಭ್ಯ ನೀಡಲಾಗಿದೆ. ಅವಶ್ಯವಿದ್ದಲ್ಲಿ Print Out ತೆಗೆದುಕೊಳ್ಳಬಹುದಾಗಿದ್ದು, ನಮೂದಿಸಿರುವ ಅಂಕಗಳು ಸರಿಯಿದೆಯೇ ಎಂದು ಪರಿಶೀಲಿಸಬಹುದಾಗಿದೆ. ಈ Printout ಗಳ ಆಧಾರದ ಮೇಲೆ ಪೋಷಕರ ಸಭೆಯಲ್ಲಿ ಮಗುವಿನ ಪ್ರಗತಿ ಬಗ್ಗೆ ಚರ್ಚಿಸಬಹುದಾಗಿರುತ್ತದೆ.
8. ಪರಿಶೀಲಿಸಿದ ನಂತರ ಪ್ರತಿ ವಿದ್ಯಾರ್ಥಿಯ ಮಾಹಿತಿಯನ್ನು Freeze ಮಾಡಬೇಕು. Freeze ಮಾಡಿದ ನಂತರ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
9. ಆಯಾ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಮೂದಿಸಿದ ನಂತರ ಶಾಲೆಯ ಕ್ರೋಢೀಕೃತ ವರದಿ (Consolidated Report) ಮುದ್ರಿಸಿಕೊಳ್ಳಬಹುದಾಗಿದೆ.
10. ಆಂತರಿಕ ಅಂಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಫಲಿತಾಂಶ ಪ್ರಕಟವಾದ ದಿನಾಂಕದಿಂದ ಕನಿಷ್ಠ ನಾಲ್ಕು ತಿಂಗಳು ಕಾಯ್ದಿರಿಸುವುದು.

ಆಯಾ ಶಾಲೆಯ ಮುಖ್ಯಸ್ಥರು ದಿನಾಂಕ: 08.04.2019 ರೊಳಗೆ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಮೂದಿಸಲು ಸೂಚಿಸಿದೆ. ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳ ಆಂತರಿಕ ಅಂಕಗಳನ್ನು ನಮೂದಿಸುವ ಕಾರ್ಯವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಕ್ರಮವಹಿಸಲು ತಿಳಿಸಿದೆ.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಎನ್.ಎಸ್.ಕ್ಯೂ.ಎಫ್ ಮತ್ತು ಜೆ.ಟಿ.ಎಸ್ ಶಾಲೆಗಳ, ಮುಖ್ಯಸ್ಥರಿಗೆ